ಅಂದಾಗ ಪೂರ ಕಂಗೆಟ್ಟು ಹೋಗ್ಗಿದ್ದೆ. ನೋವಿನ ಸಂಚಲನದಲ್ಲಿ ಮೈ–ಮನಗಳು ನಲುಗಿ ಹೋಗುತ್ತಿದ್ದವು. ಸಲ್ಲದ ಪರಿತಾಪವೊಂದು ಸದಾ ಸುತ್ತಿರುತ್ತಿತ್ತು. 'ಬಾಣಂತಿ ಹುಡುಗಿ, ಹೀಗಾದರೆ ಇವಳ ಆರೋಗ್ಯದ ಗತಿಯೇನು?' ಎಂದು ಅಮ್ಮ ಅಪ್ಪ ವಿಪರೀತ ತಲೆಕೆಡಿಸಿಕೊಳ್ಳುವ ಹಾಗಾಯಿತು. ಈತನಿಗಿಂತ ಒಂದಿಷ್ಟು ಕೆಳಮಟ್ಟದ ಕುಡುಕರಾಗಿದ್ದ ಕುಞ್ಞಿರಾಮ, ಶಿವದಾಸರಲ್ಲಿ ಚರ್ಚಿಸಿ, ಒಂದು ಒತ್ತಾಯದ ಒಡಂಬಡಿಕೆಯಲ್ಲಿ ಅವನನ್ನು ವಯನಾಡಿಗೆ ಸಾಗಿಸಿದ್ದಾಯಿತು.

ನನ್ನ ಮನಸ್ಸಿಗೆ ನೆಮ್ಮದಿಯೇ ಇರಲಿಲ್ಲ. ಕಣ್ಣು ಮುಚ್ಚಿದರೆ ಆ ಕರೆ ಮತ್ತೆ ಕೇಳಿದಂತಾಗಿ ಬೆಚ್ಚಿ ಬೀಳುತ್ತಿದ್ದೆ. ನಮ್ಮ ಫ್ಯಾಮಿಲಿ ಡಾಕ್ಟರ್ ಅವರ ಸಾಧ್ಯತೆಯ ಪರಿಧಿಯಲ್ಲಿ ಒಂದಷ್ಟು ಕೌನ್ಸಿಲಿಂಗ್ ನಡೆಸಿದರು. ದಿನ ಹೋದಂತೆ ಮರೆಯಲಿಕ್ಕೇ ಆಗದ ವಿಚಾರಗಳನ್ನ ಕ್ರಮೇಣ ಮರೆತಂತಿರುವುದು, ತಡೆಯಲಾಗದುದನ್ನು ತಡೆದು ನಿಲ್ಲುವುದು ಬದುಕಿರಬೇಕಾದವರಿಗೆ ಸಹಜವಾಗಿ ಅನಿವಾರ್ಯ. ಭೂತದ ವಿಷಯ–ವಿಪರ್ಯಾಸಗಳಲ್ಲಿ ಗೋಜಲಾಗಿ ಉಳಿದರೆ ಮತ್ತೆ ಭವಿಷ್ಯವೂ ಅದೇ ಬಲೆಯಲ್ಲಿ ಸಿಲುಕಿಕೊಳ್ಳುವುದು. ಕೆಲವೊಂದು ಕನವರಿಕೆಗಳಿಂದ ಕಳಚಿಕೊಳ್ಳಲೇಬೇಕು. ಮುಂದಿನ ಕೆಲವೊಂದು ವರ್ಷಗಳು ತಮ್ಮದೇ ಆದ ಧಾರಣ ಧಾವಂತಗಳೊಂದಿಗೆ ತಮ್ಮದೇ ಗತಿಯಲ್ಲಿ ಸರಿದುಹೋದವು. ಮಕ್ಕಳ ಲಾಲನೆ, ಅವರ ವಿದ್ಯಾಭ್ಯಾಸ, ಹಿರಿಯರ ಪಾಲನೆ, ಪರಿಭವಗಳು–ಈ ಯಾತ್ರೆಯ ನಡುವೆ ವೇಲುವಿನ ನೆನಪು ಅಲ್ಲಲ್ಲೆ ಮರೆಯಾಗಿ ಕೆಲವೊಮ್ಮೆ ನುಸುಳಿ ಬರುತ್ತಿತ್ತು. ಅದೂ ಈಗ ನನಗೊಬ್ಬಳಿಗೆ–ಅಷ್ಟೇ.

ಸಾಂಸ್ಕೃತಿಕ ಪ್ರತಿಷ್ಠಾನದ ಸದಸ್ಯರೊಂದಿಗೆ ಉತ್ತರ ಭಾರತದ ಕ್ಷೇತ್ರದರ್ಶನ ಮುಗಿಸಿ ಮನೆಗೆ ಮರಳಿದ್ದೆವು. ಯಾತ್ರೆಯ ದಣಿವನ್ನು ಮೀರಿದ ಸಂತೃಪ್ತಿಯಿತ್ತು. 'ಕಳೆದ ವಾರ ನಿನ್ನನ್ನು ಕೇಳಿ ಒಬ್ಬ ಮುದುಕ ಬಂದಿದ್ದ. ಒಂದಕ್ಕೊಂದು ಸಂಬಂಧವೇ ಇಲ್ಲದೆ ಮಾತಾಡುತ್ತಿದ್ದ. ತಾನು ಯಾರೆಂದು ಹೇಳುವಷ್ಟೂ ನೆನಪಿನ ಶಕ್ತಿ ಇಲ್ಲ. ಹೇಗೋ ಮಾಡಿ ಸಾಗಹಾಕಿದೆ' ಅಂದ ಮಗ. ಯಾರಿರಬಹುದು? ಕೂಡಲೇ ನೆನಪಾದದ್ದು ವೇಲಾಯುಧನದು. ಎಲ್ಲಿ ಹೋಗಿರಬಹುದು? ಏನಾಗಿರಬಹುದು? ಯಾತ್ರೆಯಲ್ಲಿ ದೊರೆತ ಶಾಂತಿ ಮರೆಯಾಗಿ ಸಾಂದ್ರ ಸಂತಾಪವೊಂದು ಕವಿದುಕೊಂಡಿತು. ಎಲ್ಲ ಪರಿತಾಪಗಳನ್ನು ಒಂಟಿತನದ ಪರಿಧಿಯಲ್ಲೇ ಅನುಭವಿಸಿದೆ. ಯಾರಿಗೆ ಹೇಳಲಿ? ಕೆಲದಿನಗಳ ತಳಮಳದ ಅಂಚಿನಲ್ಲಿ ನಾನೊಂದು ತೀರ್ಮಾನ ತೆಗೆದುಕೊಂಡೆ. ಅಲ್ಲ, ಅವನಲ್ಲ. ಎಲ್ಲೋ ಶಿವದಾಸನೊಮ್ಮೆ ಸಿಕ್ಕಿದ್ದ. ಈಗ ಮಕ್ಕಳು ದೊಡ್ಡವರಾಗಿ ಸ್ವತಂತ್ರ ಬದುಕು ತೊಡಗಿದ ಮೇಲೆ ಅವನನ್ನು ಜೊತೆಗಿರಿಸಿ ಸರಿಯಾಗಿ ನೋಡ್ತಿದ್ದಾರೆ' ಅಂದಿದ್ದ. ಅವನು ಚೆನ್ನಾಗಿದ್ದಾನೆ, ನೆಮ್ಮದಿಯಾಗಿದ್ದಾನೆ–ಅದೇ ಸರಿ. ಅದೇ ಸತ್ಯ. ಹಾಗೇ ಇರಲಿ. 'ಹಣೆಬರಹ ಅಂದ್ರೆ ಅದು ನಮ್ಮ ಕೈಬರಹವೇ ಅಲ್ವಾ ಮಾಸ್ಟ್ರೆ' ಅನ್ನುತ್ತಿದ್ದ ನೆನಪಾಯಿತು. ಆದರೆ, ನನ್ನ ಹುಡುಕಿ ಬಂದವನಾರು? ಅವನೇಕೆ ಬಂದ?

**ಶಶಿಕಲಾ ಬಾಯಾರು**

ಕಾಸರಗೋಡು ಜಿಲ್ಲೆಯ ಪೆರ್ಲ ಹುಟ್ಟೂರು. ಗಡಿನಾಡ ಬಾಯಾರು ವಾಸವಿರುವ ಊರು. ಕಸೂತಿ ಕಲೆಯಲ್ಲಿ ಹೆಚ್ಚಿನ ಆಸಕ್ತಿ ಮತ್ತು ಸ್ವಯಂ ಪರಿಶ್ರಮದ ಪರಿಣತಿ. ವಿಭಿನ್ನ ಶೈಲಿಯ ಚಿತ್ರಗಳಿಗೆ ಪ್ರದರ್ಶನಗಳಲ್ಲಿ ಪ್ರಶಂಸೆ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆ. ಪತ್ರ ಸಾಹಿತ್ಯದಲ್ಲಿ ಹೆಚ್ಚಿನ ಅಭಿರುಚಿ. ಪತ್ರಿಕೆಗಳಲ್ಲಿ ಪ್ರಕಟವಾದ ಹಲವಾರು ಪತ್ರಗಳು 'ಪತ್ರಾರ್ಜಿತ' ಎನ್ನುವ ಪುಸ್ತಕ ರೂಪ ಪಡೆದಿವೆ.